ಅಭಿವ್ಯಕ್ತಿಗೆ ಹೆಚ್ಚು ನ್ಯಾಯ ಒದಗಿಸಿಕೊಡುವುದರಿಂದ ಖಯಾಲ್ ಗಾಯನ ಪ್ರಕಾರವು ಹಿಂದೂಸ್ತಾನಿ ಸಂಗೀತದಲ್ಲಿ ಹೆಚ್ಚು ಜನಪ್ರಿಯವಾಯಿತು. ಪ್ರಬಂಧಗಳ ಮೇಲೆ ಅವಲಂಬಿತವಾಗಿರುವ ದ್ರುಪದ್ ಗಾಯನ ಹಿಂದೂಸ್ತಾನಿ ಸಂಗೀತದಿಂದ ಹಿನ್ನೆಲೆಗೆ ಸರಿಯುತ್ತಾ, ಖಯಾಲ್, ಠುಮ್ರಿ, ದಾದ್ರಾ, ಕಜ್ರಿ ಹಾಗೂ ಟಪ್ಪಾ ಅರೆ ಶಾಸ್ತ್ರೀಯ ಗಾಯನ ಪ್ರಕಾರಗಳು ಕಛೇರಿಯ ಕೇಂದ್ರ ಬಿಂದುಗಳಾದವು. ದ್ರುಪದ್ ಗಾಯನವು ಧೀಮಂತ ಹಾಗೂ ರಾಜಗಾಂಭೀರ್ಯದಿಂದ ಕೂಡಿದ ಗಾಯನ ಶೈಲಿಯಾಗಿದ್ದು ಇದರಲ್ಲಿ ದೇವರ ಸ್ತುತಿ ಮತ್ತು ರಾಜಾಶ್ರಯ ನೀಡಿದ ರಾಜರನ್ನು ಹೊಗಳುವ ರಚನೆಗಳನ್ನು ಒಳಗೊಂಡಿದೆ. ಆದರೆ, ಖ್ಯಾಲ್ ಗಾಯನದ ರಚನೆಗಳಲ್ಲಿ ಮನದ ಭಾವನೆಗಳ ಅಭಿವ್ಯಕ್ತಿಗೆ ಸಂಪೂರ್ಣ ಸ್ವಾತಂತ್ರ್ಯವಿದ್ದುದರಿಂದ ಅದು ಎಲ್ಲಾ ಕಲಾವಿದರ ಪ್ರಿಯವಾದ ಗಾಯನವಾಯಿತು. ದೈವದತ್ತ ಕೊಡುಗೆಯಾಗಿ ಬಂದಿದ್ದ ತಮ್ಮ ಕಂಠಸಿರಿಗೆ ಹೇಳಿಮಾಡಿಸಿದಂತಿದ್ದ ಖಯಾಲ್ ಮತ್ತು ಠುಮ್ರಿ ಗಾಯನ ಪ್ರಕಾರವನ್ನು ಗುಲಾಂ ಅಲಿ ಖಾನ್ ಅವರು ಪರಿಣಾಮಕಾರಿಯಾಗಿ ಬಳಸಿಕೊಂಡರು. ಠುಮ್ರಿಯ ಗಾಯನ ಪ್ರಕಾರದ ಬೋಲ್ ಬನಾವ್ ಎಂಬ ಸಂಪ್ರದಾಯವನ್ನು ಮುರಿದು ಕಡಿಮೆ ಶ್ರಮ ಬೇಡುವ ವೈವಿಧ್ಯಮಯ ಧ್ವನಿ ಮಾಧುರ್ಯದ ಮೂಲಕ ಸಂಗೀತದ ಸಂಗತಿಗಳನ್ನು(ನೋಟ್ಸ್) ಪ್ರಸ್ತುತ ಪಡಿಸುವುದರ ಜೊತೆಗೆ ಭವಿಷ್ಯದ ಕಲಾವಿದರಿಗೆ ದಾರಿ ದೀಪವಾದರು. ಈ ಪ್ರಯೋಗವವನ್ನು ಮುಂದಿನ ದಿನಗಳಲ್ಲಿ ಸಿದ್ದೇಶ್ವರಿದೇವಿ ಮತ್ತು ಬೇಗಂ ಅಖ್ತರ್, ಪ್ರಭಾ ಅತ್ರೆ, ಕಿಶೋರಿ ಅಮೋಣಕರ್‌ರಂತಹ ಮೇರು ಕಲಾವಿದೆಯರು ಇನ್ನಷ್ಟು ಅಭಿವೃದ್ಧಿ ಪಡಿಸಿ, ಠುಮ್ರಿ ಗಾಯನ ಪ್ರಕಾರವನ್ನು ಹಿಂದೂಸ್ತಾನಿ ಸಂಗೀತದಲ್ಲಿ ಜನಪ್ರಿಯಗೊಳಿಸಿದರು.

ಅರವತ್ತನಾಲ್ಕನೆಯ ವಯಸ್ಸಿನವರೆಗೆ ಜನಪ್ರಿಯತೆಯ ತುತ್ತ ತುದಿಯಲ್ಲಿದ್ದ ಗುಲಾಂ ಅಲಿ ಖಾನ್ ಅವರು 1966ರಲ್ಲಿ ಪಾರ್ಶ್ವವಾಯುಗೆ ತುತ್ತಾದರು. ತಮ್ಮ ದೈಹಿಕ ತೊಂದರೆಯ ನಡುವೆಯೂ ತಮ್ಮ ಕಿರಿಯ ಪುತ್ರ ಮುನಾವರ್ ಅಲಿ ಖಾನ್ ಜೊತೆಗೆ ಸಂಗೀತ ಕಛೇರಿ ನೀಡುತ್ತಿದ್ದ ಅವರು 1968ರ ಏಪ್ರಿಲ್ 23ರಂದು ಹೈದರಾಬಾದ್ ನಗರದಲ್ಲಿ ನಿಜಾಮರಿಗೆ ಸೇರಿದ ಬಶೀರ್ ಬಾಗ್ ಅರಮನೆಯಲ್ಲಿ ಅತಿಥಿಯಾಗಿ ಉಳಿದುಕೊಂಡಿದ್ದ ಸಂದರ್ಭದಲ್ಲಿ ನಿಧನರಾದರು.

ಹಿಂದೂಸ್ತಾನಿ ಸಂಗೀತವು ತನ್ನ ಇತಿಹಾಸದುದ್ದಕ್ಕೂ ಧರ್ಮ, ಜಾತಿ, ಪ್ರಾದೇಶಿಕತೆ ಮತ್ತು ಭಾಷೆ ಇವುಗಳ ಗಡಿಯನ್ನು ಮೀರಿ ಭವ್ಯವಾದ ಮನುಕುಲದ ಪ್ರೀತಿಯ ಸಂವಹನದ ಭಾಷೆಯ ರೂಪದಲ್ಲಿ ಗುಪ್ತಗಾಮಿನಿಯಂತೆ ಹರಿದು ಬಂದಿದೆ. ಇದರ ಪೋಷಕರು, ಕಲಾವಿದರು ಬಹುತೇಕ ಮುಸ್ಲಿಂ ಸಮುದಾಯಕ್ಕೆ ಸೇರಿದವರು. ಅವರೆಂದೂ ಹಿಂದೂಸ್ತಾನಿ ಸಂಗೀತವನ್ನು ಧರ್ಮ ಅಥವಾ ಜಾತಿಯ ಸರಪಳಿಯಿಂದ ಬಂಧಿಸಲಿಲ್ಲ. ಈ ಕಾರಣಕ್ಕಾಗಿ ಕೊಲ್ಲಾಪುರದ ಸಾಹು ಮಹಾರಾಜ್‌ನ ಆಸ್ಥಾನದಲ್ಲಿ ಗಾಯಕರಾಗಿದ್ದ ಉಸ್ತಾದ್ ಅಲ್ಲಾದಿಯಾ ಖಾನ್ ಪ್ರತಿ ದಿನ ಬೆಳಗ್ಗೆ ಎದ್ದು ಅಲ್ಲಿನ ಮಹಾಲಕ್ಷ್ಮಿ ದೇಗುಲದ ಗರ್ಭಗುಡಿಯ ಎದುರು ಕುಳಿತು ಮೈ ಮರೆತು ಭಜನ್‌ಗಳನ್ನು ಹಾಡುತ್ತಿದ್ದರು. ಶಹನಾಯಿ ವಾದಕ ಉಸ್ತಾದ್ ಬಿಸ್ಮಿಲ್ಲಾ ಖಾನ್‌ರ ಗುರು ಮತ್ತು ಸೋದರಮಾವ ಅಲ್ಲಾ ಭಕ್ಷ್ ಖಾನರು ಬೆಳಗಿನ ಐದು ಗಂಟೆಯ ಸಮಯದಲ್ಲಿ ದೂರದ ಮಸೀದಿಯಿಂದ ಕೇಳಿಬರುತ್ತಿದ್ದ ಪ್ರಾರ್ಥನೆಗೆ ಕಿವಿಗೊಡದೆ ವಾರಣಾಸಿಯ ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಕುಳಿತು ಶಹನಾಯ್ ನುಡಿಸುತ್ತಿದ್ದರು. ತನ್ನ ಶಿಷ್ಯ ಬಿಸ್ಮಿಲ್ಲಾ ಖಾನರಿಗೆ ಗಂಗಾ ನದಿಯ ತಟದಲ್ಲಿರುವ ಬಾಲಾಜಿ ಮಂದಿರದಲ್ಲಿ ಇಂತಹದ್ದೇ ಕಾಯಕಕ್ಕೆ ನೇಮಕ ಮಾಡಿದರು. ಸೀತಾರ್ ವಾದಕ ಪಂಡಿತ್ ಅಲ್ಲಾವುದ್ದೀನ್ ಖಾನರು ತಮ್ಮ ಮಗಳಿಗೆ ಅನ್ನಪೂರ್ಣಾ